**ನವೆಂಬರ್**, 2019

## ಮೇಷ




ಹಣಕಾಸಿನ ವ್ಯವಹಾರದ ನಿಮ್ಮ ನಿರ್ವಹಣೆ, ಸಾಮರ್ಥ್ಯ ಹೆಚ್ಚಿನ ಪ್ರಶಂಸೆ ತಂದುಕೊಡುವುದು. ಚಾಣಾಕ್ಷ್ಯತನದಿಂದ ದೊಡ್ಡ ಕೆಲಸಗಳನ್ನು ಲೀಲಾಜಾಲವಾಗಿ ಮಾಡಿ ಮುಗಿಸುವಿರಿ. ಕಲಾವಿದರಿಗೆ ಯಶಸ್ಸು.

**ಶುಭ:** 12, 18, 28

**ಅಶುಭ:** 10, 16, 24

## ಕರ್ಕ




ವ್ಯವಹಾರ ಮಾಡುವಾಗ ಎದುರಿನವರ ಪೂರ್ವಾಪರಗಳನ್ನು ತಿಳಿದುಕೊಳ್ಳಿ. ವಾಹನ ಚಲಾಯಿಸುವಾಗ ಎಚ್ಚರವಹಿಸಿ. ಬೆಳ್ಳಗಿರುವುದೆಲ್ಲಾ ಹಾಲಲ್ಲ ಎಂಬುದು ನಿಮಗೆ ಗೊತ್ತಾಗುವ ಹೊತ್ತಿಗೆ ಹಣ ಕಳೆದುಕೊಳ್ಳುವಿರಿ, ಎಚ್ಚರಿಕೆ ಇರಲಿ.

**ಶುಭ:** 14, 20, 25

**ಅಶುಭ:** 10, 18, 22

## ವೃಷಭ




ಎಲ್ಲಾ ವಿಚಾರಕ್ಕೂ ಇತರರ ಸಲಹೆಯನ್ನು ಕೇಳುತ್ತಾ ಉತ್ತಮ ಅವಕಾಶ ತಪ್ಪಿಸಿಕೊಳ್ಳಬೇಡಿ. ಅಂಜಿಕೆ, ಅಧೈರ್ಯ ಬದಿಗಿಟ್ಟು ಮುನ್ನುಗ್ಗಿ, ಕೈಗೆ ಬರುವ ಕೆಲಸವನ್ನು ಮಾಡಿ. ಸನ್ಮಾನ, ಸರ್ಕಾರಿ ನೌಕರಿ, ಬಡ್ತಿ ಯೋಗವಿದೆ.

**ಶುಭ:** 08, 14, 21

**ಅಶುಭ.** 06, 17, 26

## ಸಿಂಹ



ಕೋಪತಾಪಗಳನ್ನು ಬದಿಗಿಟ್ಟು ಇತರರೊಡನೆ ಬೆರೆತರೆ ಸಂತಸ ನಿಮ್ಮದಾಗಲಿದೆ. ಕಾರ್ಯಗಳಲ್ಲಿ ಯಶಸ್ಸು, ಶಾಂತಿಯಿಂದ ಮನಸ್ಸಿನ ನೆಮ್ಮದಿ. ಆದಾಯದಲ್ಲಿ ಏರಿಕೆಯಿದೆ. ವಿವಾಹ ಸಂಭವ.

**ಶುಭ:** 08, 15, 23

**ಅಶುಭ:** 05, 13, 27

## ಮಿಥುನ



ನಂಬಿದ ಜನರು ಕೈಕೊಡುವರು. ಮನೆಯಲ್ಲಿ ಕಿರಿಕಿರಿ. ಕೋರ್ಟ್ ಪ್ರಕರಣದಲ್ಲಿ ಹಿನ್ನಡೆ. ಆದಾಯಕ್ಕಿಂತ ಖರ್ಚು ಜಾಸ್ತಿ. ಉದ್ಯೋಗದಲ್ಲಿ ಬದಲಾವಣೆ. ಉತ್ತಮ ದಿನಕ್ಕಾಗಿ ತಾಳ್ಮೆಯಿಂದ ಕಾಯಿರಿ.

**ಶುಭ:** 14, 22, 29

**ಅಶುಭ:** 10, 18, 25

## ಕನ್ಯಾ



ಮೇಲಾಧಿಕಾರಿಗಳ ಅಥವಾ ಮನೆಯ ಹಿರಿಯರ ಪ್ರೀತಿ ಗೆಲ್ಲುವಿರಿ. ನಿಮ್ಮ ನಡೆನುಡಿ ಪ್ರಶಂಸೆಗೆ ಒಳಪಡುವುದು. ಮಂಗಲ ಕಾರ್ಯದಲ್ಲಿ ಭಾಗಿಯಾಗುವಿರಿ. ಕುಟುಂಬದಲ್ಲಿ ಸಂತಸ, ನೆಮ್ಮದಿ.

**ಶುಭ:** 11, 17, 26

**ಅಶುಭ:** 10, 18, 24